ಪಿ.ಎಸ್. ಶ್ರೀವತ್ಸ, ಬೆಂಗಳೂರು

ಸೊಳ್ಳೆ, ನೊಣ; ಇವುಗಳಲ್ಲಿ ಹೆಚ್ಚು ಅಪಾಯಕಾರಿ ಯಾವುದು?



ಸೊಳ್ಳೆಯೇ; ಕಿವಿಯ ಬಳಿ ಗುಂಯ್‌ಗುಟ್ಟಿದಾಗ ಕಿವಿಗೆ ಹೊಡೆದುಕೊಂಡು ಕಿವುಡಾಗುವ ಸಾಧ್ಯತೆ ಇದೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ನಮ್ಮ ದೇಶದಲ್ಲಿ ಎಲ್ಲರಿಗೂ ಸಮಾನವಾಗಿ ಸಿಗುವ ವಸ್ತು ಯಾವುದು?

ಒಂದಲ್ಲ, ಎರಡು – ವಾಯುಮಾಲಿನ್ಯ, ಜಲಮಾಲಿನ್ಯ.

ಶೃತಿ ರಿಗ್ರೆಟ್ ಐಯ್ಯರ್, ಬೆಂಗಳೂರು

ಕಣ್ಣೀರಿಗೂ ಪನ್ನೀರಿಗೂ ಏನು ಅಂತರ?

ಕಣ್ಣೀರ್ ಬಟರ್ ಮಸಾಲಾ ಚೆನ್ನಾಗಿರಲ್ಲ.

ಬಿ.ಆರ್. ಉಷಾ, ಬೆಂಗಳೂರು

ಆರೋಗ್ಯವೇ ಅರಮನೆ. ಅನಾರೋಗ್ಯವೇ?

ಸೆರೆಮನೆ.

ಪಿ.ಜೆ. ರಾಘವೇಂದ್ರ, ಮೈಸೂರು

ಬಿಗ್‌ಬಾಸ್ ಕಾರ್ಯಕ್ರಮದಲ್ಲಿ ರಾಜಕಾರಣಿಗಳೇಕೆ ಭಾಗವಹಿಸಲ್ಲ?




ಸೂಟ್‌ಕೇಸೇ ಕೊಡದೆ ಟಾಸ್ಕ್ ಮಾಡೂಂದ್ರೆ ಯಾವಾನ್ ಬರ್ತಾನೆ!

ಆರ್. ಮಧುಸೂದನ್, ಹಾಸನ

ಹೆಣ್ಣು ದಾರಿ ತಪ್ಪಿಸುತ್ತಾಳೆ ಎಂದು ಗೊತ್ತಿದ್ದರೂ ಗೂಗಲ್ ಮ್ಯಾಪ್‌ನಲ್ಲಿ ಹೆಣ್ಣಿನ ಧ್ವನಿ ಏಕೆ?

ಹೆಣ್ಣಿನ ಧ್ವನಿ ಕೇಳಿಸಿಕೊಳ್ಳುವುದಕ್ಕಾಗಿ ಗಂಡಸರು ದಾರಿ ತಪ್ಪಲೂ ಸಿದ್ಧರಾಗುವುದರಿಂದ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಅತಿ ಸುಲಭವಾಗಿ ಸಿಗುವ ವಸ್ತು ಯಾವುದು ಸರ್?

ಫೇಸ್‌ಬುಕ್ ಅಕೌಂಟ್.

ಅಪೇಕ್ಷಾ ಎಸ್.ಡಿ.

ನಮ್ಮ ಜೀವನ ತುಂಬಾ ಸುಂದರವಾಗಿ ಇರುತ್ತದೆ. ಆದರೆ ಈ ಜಗತ್ತು ಏಕೆ ಅಷ್ಟು ಕೆಟ್ಟದಾಗಿ ಇರುತ್ತದೆ?

ಜಗತ್ತು ಸುಂದರವಾಗೇ ಇದೆ. ತಮ್ಮ ತಮ್ಮ ಸುಂದರ ಜೀವನಕ್ಕಾಗಿ ಅದನ್ನು ಕೆಡಿಸುವವರು ಹೆಚ್ಚಾಗಿದ್ದಾರೆ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಭಾವನೆಗಳು ಗಂಡಸರಲ್ಲಿ ಹೆಚ್ಚೋ ಹೆಂಗಸರಲ್ಲೋ?

'ಭಾವ, 'ಭಾವಮೈದ' ಹೆಸರಲ್ಲೂ 'ಭಾವ' ತುಂಬಿರುವ ಗಂಡಸರಲ್ಲೇ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಅಮಾಯಕರ ಮುಖವಾಡ ಧರಿಸಿ ಲೂಟಿ ಹೊಡೆಯುವರಿಗೆ ಯಾವ ಐಪಿಸಿ ಸೆಕ್ಷನ್ ಅನ್ವಯವಾಗುತ್ತೆ?

ಸೆಕ್ಷನ್ ಅಲ್ಲ, ಇಡೀ ಕೋಡೇ ಅನ್ವಯವಾಗತ್ತೆ, ಆದರೆ ಅನುಷ್ಠಾನವಾಗಲ್ಲ.

ವೈ.ವಿ. ಪ್ರಭಾಕರ, ಬೆಂಗಳೂರು

ನಿಮ್ಮ ಕೆಲವು ಉತ್ತರಗಳನ್ನು ಓದಿದಾಗ ನನ್ನ ಮಂಡೆ ಬಿಸಿಯಾಗ್ತದಲ್ಲ ಮಾರಾಯ್ರೆ...?

ಟ್ಯೂಸ್‌ಡೇ ಸರಿಹೋಗತ್ತೆ ಬಿಡಿ.

ಮಲ್ಲಿಕಾರ್ಜುನ, ಸುರಧೇನುಪುರ

ಜನಪ್ರತಿನಿಧಿಗಳು ಯಾವ ಘನಂದಾರಿ ಕಾರಣಕ್ಕೆ ರಾಜಕಾರಣಿಗಳಾದರು?

'ನಂ (ನನ್ನ) ದಾರಿ ಘನವಾಗಿರಲಿ' ಎಂಬ ಸ್ವಂತ ಕಾರಣಕ್ಕೆ.

ಜಗದೀಶ ಬಿ. ಹೊಸೂರು, ಮೈಸೂರು

ಪತ್ರಿಕೆಗಳಲ್ಲಿ ಮುಂದುವರಿದು ಮುಗಿಯುತ್ತೆ. ವಾಹಿನಿಗಳಲ್ಲಿ ಮುಗ್ಗರಿಸುತ್ತಾ ಮುಗಿಯಲ್ಲ. ಅದು ಏನು?

ಧಾರಾವಾಹಿ, ಜಾಹೀರಾತು, ವರದಿಗಾರನ ಕೊಳಕು ಉಚ್ಚಾರ...

ಮಧುಮತಿ ಅಭಿಷೇಕ್, ಚಿತ್ರದುರ್ಗ

ರಾಜಕಾರಣಿಗೂ ರಾಜಕಾಲುವೆಗೂ ವ್ಯತ್ಯಾಸವೇನು?

ರಾಜಕಾಲುವೆ ಸ್ವಚ್ಛವಾಗುವ ಸಾಧ್ಯತೆ ಇದೆ.

## ವಾರದ ಪ್ರಶ್ನೆ

ಬೂಕನಕೆರೆ ವಿಜೇಂದ್ರ, ಮೈಸೂರು

ಭಿಕ್ಷುಕರಿಗೇಕೆ ಕೊರೊನಾ ಬರಲಿಲ್ಲ?

ಅವರಿಂದ ಜನರೇ ಡಿಸ್ಟೆನ್ಸ್ ಮೆಂಟೇಯ್ನ್ ಮಾಡಿದರಲ್ಲ!

ಬಿ.ಚಂದ್ರೇಗೌಡ, ಬೆಂಗಳೂರು

ಅಡುಗೆ ಮಾಡುವುದು ಕಲೆಯೋ ವಿಜ್ಞಾನವೋ?

ಮಾಡುವಾಗ ವಿಜ್ಞಾನ; ಬಟ್ಟೆಯ ಮೇಲೆ ಬಿದ್ದಾಗ ಕಲೆ.

ಎಂ.ಟಿ. ರಮಾನಂದರೆಡ್ಡಿ, ಚಿತ್ರದುರ್ಗ

ತಾಯಿಯೇ ದೇವರು. ತಂದೆ ಮತ್ತು ಮಕ್ಕಳು?

ದೇವರಿಂದಲೇ ಸಹಸ್ರನಾಮ, ಮಂಗಳಾರತಿ ಮಾಡಿಸಿಕೊಳ್ಳುವ 'ಅರಚುಕರು'.

ರಾಮಸ್ವಾಮಿ, ಭೀಮನಕಟ್ಟೆ

ಅಮಾಯಕ ಉಗ್ರಗಾಮಿಗಳು ಎಂದರೆ ಏನು?

ಎಡಿಹೆಚ್‌ಡಿ ಇರುವ ಮಕ್ಕಳು.

ಆರ್. ಮಧುಸೂದನ್, ಹಾಸನ

ಪ್ರೀ ವೆಡ್ಡಿಂಗ್ ಫೋಟೊ ಶೂಟ್ ನಡೆಯುತ್ತಿರುವ ಈ ಕಾಲದಲ್ಲಿ 'ಅಂತರಪಟ' ಶಾಸ್ತ್ರ ಅವಶ್ಯವೆ?



ಅಂದಿನ ಲೇಟೆಸ್ಟ್ ಮೇಕಪ್, ಹೇರ್‌ಸ್ಟೈಲ್ ಸಸ್ಪೆನ್ಸಲ್ಲಿರಿಸಲು ಅವಶ್ಯವಂತೆ.

ಡಾ. ತಿಮ್ಮರಾಜು, ದಾವಣಗೆರೆ

ಮಡದಿ ಏನು ಕೇಳಿದರೂ ಯೂ ಟ್ಯೂಬ್ ನೋಡಿ ಹೇಳುತ್ತೇನೆ ಎನ್ನುತ್ತಾರೆ. ಕಾರಣ?

ಗೂಗಲ್ ಬ್ರಹ್ಮ, ಯೂಟ್ಯೂಬ್ ಸರಸ್ವತಿ, ಗಂಡ ಗುಗ್ಗು ಎಂದು ಮಡದಿ ಬಲವಾಗಿ ನಂಬಿರುವುದರಿಂದ.

■ **ರಾಮ್**

ಪ್ರಶ್ನೆ ಕಳಿಸಲು: editorsu@sudha.co.in